**ದಿನಾಂಕಃ 27/03/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ವಾದಿ ಪರ ಶ್ರೀ ಜಿ.ಸಿ.ಜಿ ವಕೀಲರಿಂದಃ**

1. ನಾನು 8 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನ್ನ ತಾಯಿಯ ಹೆಸರು ಸಂದ್ರಮ್ಮ. ತಂದೆಯ ಹೆಸರು ನಂಜೇಗೌಡ. ನಂಜೇಗೌಡರ ತಾಯಿಯ ಹೆಸರು ಪುಟ್ಟಮ್ಮ, ತಂದೆಯ ಹೆಸರು ಜವರೇಗೌಡ. ಜವರೇಗೌಡರ ತಾಯಿಯ ಹೆಸರು ಗೊತ್ತಿಲ್ಲ. ಅಕ್ಕಯ್ಯಮ್ಮ ನವರ ಮಗಳು ಪುಟ್ಟಮ್ಮ ಎಂದರೆ ನನಗೆ ಗೊತ್ತಿಲ್ಲ. ಅಕ್ಕಯ್ಯಮ್ಮನ ಅಳಿಯ ಜವರೇಗೌಡ ಎಂದರೆ ನನಗೆ ಗೊತ್ತಿಲ್ಲ. ಜವರೇಗೌಡ ಮತ್ತು ಪುಟ್ಟಮ್ಮ ನವರಿಗೆ ನಂಜೇಗೌಡ, ಲಕ್ಷ್ಮಿ, ದೇವಮ್ಮ, ಸಾಕಮ್ಮ, ಸರೋಜಮ್ಮ ಎಂಬ ಮಕ್ಕಳು. ನನ್ನ ತಂದೆಗೆ ಶಶಿ, ದಿನೇಶ ಮತ್ತು ಶೋಭ ಎಂಬ 3 ಜನ ಮಕ್ಕಳು. ವಾದಿ-ದೇವಮ್ಮ ನನ್ನ ಅತ್ತೆ. ವಾದಿ ಪಾಲು ಬೇಕೆಂದು ದಾವೆ ಹೂಡಿದ್ದಾರೆ. ಸರ್ವೆ ನಂ. 71ರ 3 ಎಕರೆ 13 ಗುಂಟೆಗೆ ದಾವೆ ಹೂಡಿದ್ದಾರೆ. ಸರ್ವೆ ನಂ.71ರ ಜಮೀನನ್ನು ಜವರೇಗೌಡರು ಸ್ವಂತ ಸಂಪಾದನೆ ಮಾಡಿದ್ದಾರೆ. ಸರ್ವೆ ನಂ.71ನ್ನು ಜವರೇಗೌಡರು ಹರಾಜಿನಲ್ಲಿ ತೆಗೆದುಕೊಂಡಿದ್ದರು. ಜವರೇಗೌಡರು ಹರಾಜಿನಲ್ಲಿ ತೆಗೆದುಕೊಂಡ ಬಗ್ಗೆ ತಿಳಿಸಿದ್ದರು. ಹರಾಜಿನ ದಾಖಲಾತಿಗಳನ್ನು ನಾನು ನೋಡಿಲ್ಲ. ಅದರೆ ಅವರ ಬಳಿ ಇತ್ತೆಂದು ತಿಳಿಸಿದ್ದರು. ದಾವಾಸ್ವತ್ತುಗಳು ಜವರೇಗೌಡರ ಹೆಂಡತಿಯ ತಾಯಿ ಅಕ್ಕಯ್ಯಮ್ಮ ನವರಿಗೆ ಸೇರಿದ್ದು ಎಂದರೆ ಸರಿಯಲ್ಲ. ಅಕ್ಕಯ್ಯಮ್ಮ ನವರಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಖುದ್ದು ಮಾಹಿತಿ ಇಲ್ಲ. ಪುಟ್ಟಮ್ಮ ನವರಿಗೆ ಎಷ್ಟು ಜನ ಮಕ್ಕಳು ಎಂದು ಗೊತ್ತು. ಅವರೇ ಈ ದಾವೆಯ ವಾದಿ ಮತ್ತು ಪ್ರತಿವಾದಿಗಳು ಎಂದರೆ ಸರಿ. ಅಕ್ಕಯ್ಯಮ್ಮನವರಿಗೆ ಪುಟ್ಟಮ್ಮ ಒಬ್ಬರೇ ಮಗಳು ಎಂದರೆ ನನಗೆ ಗೊತ್ತಿಲ್ಲ.

2. ಅಕ್ಕಯ್ಯಮ್ಮನವರು ಪುಟ್ಟಮ್ಮನವರನ್ನು ಜವರೇಗೌಡರಿಗೆ ಮದುವೆ ಮಾಡಿಕೊಟ್ಟ ನಂತರ ಪುಟ್ಟಮ್ಮ ಮತ್ತು ಜವರೇಗೌಡ ಅಕ್ಕಯ್ಯಮ್ಮನವರ ಮನೆಯಲ್ಲೇ ಇದ್ದರು ಎಂದರೆ ಸರಿಯಲ್ಲ. ಜವರೇಗೌಡರು ತಮ್ಮ ಜೀವಿತಕಾಲದಲ್ಲಿ ಹುಣಸೇಕುಪ್ಪೆ ಗ್ರಾಮದ ಸ್ವಂತ ಮನೆಯಲ್ಲಿ ವಾಸವಿದ್ದರು. ಅದು ಜವರೇಗೌಡರ ಸ್ವಂತ ಮನೆ ಎಂದು ತೋರಿಸುವ

ದಾಖಲೆಯನ್ನು ನಾನು ನೋಡಿಲ್ಲ, ಆದರೆ ಇದೆ ಎಂದು ತಿಳಿಸಿದ್ದರು. ಹುಣಸೇಕುಪ್ಪೆಯ ಮನೆ ಮತ್ತು ಜಾಗ ಅಕ್ಕಯ್ಯಮ್ಮ ನವರಿಗೆ ಸೇರಿದ್ದು ಎಂದರೆ ಸರಿಯಲ್ಲ. ದಾವಾ ಐಟಂ ನಂ.2 ಈಗ ಪುಟ್ಟಮ್ಮ ಮತ್ತು ಜವರೇಗೌಡರ ಹೆಸರಿನಲ್ಲಿದೆ.

3. ನಾನು ಮತ್ತು 7 ನೇ ಪ್ರತಿವಾದಿ ಬಹಳ ವಿಶ್ವಾಸದಲ್ಲಿದ್ದೇವೆ ಎಂದರೆ ಸರಿಯಲ್ಲ, ಆದರೆ ಅಂತಹ ವಿಶ್ವಾಸದಲ್ಲಿಲ್ಲ. 7 ನೇ ಪ್ರತಿವಾದಿಯವರ ಬೈಕಿನಲ್ಲಿ ಈ ದಿನ ನ್ಯಾಯಾಲಯಕ್ಕೆ ಬಂದಿದ್ದೇನೆ ಎಂದರೆ ನಾನು ನಡೆದುಕೊಂಡು ಬರುವಾಗ ಹತ್ತಿಸಿಕೊಂಡು ಬಂದರು ಎಂದು ನುಡಿಯುತ್ತಾರೆ. ಸಾಕ್ಷಿಗೆ ಒಂದು ಫೋಟೋ ತೋರಿಸಿ ಅದರಲ್ಲಿರುವ ವ್ಯಕ್ತಿ ಯಾರೆಂದರೆ ನಾನು ಎಂದು ನುಡಿಯುತ್ತಾರೆ. ಸದರಿ ಫೋಟೋವನ್ನು **ನಿಪಿ.13** ಎಂದು, ಗುರುತಿಸಿದಂತಹ ತನ್ನ ಭಾವಚಿತ್ರವನ್ನು **ನಿಪಿ.13(ಎ)** ಎಂದು ಗುರುತಿಸಲಾಯಿತು. ಅದರಲ್ಲಿ ಬಿಳಿ ಶರ್ಟ್ ಹಾಕಿಕೊಂಡವರು 7 ನೇ ಪ್ರತಿವಾದಿ. 7 ನೇ ಪ್ರತಿವಾದಿಯ ಭಾವಚಿತ್ರವನ್ನು **ನಿಪಿ.13(ಬಿ)** ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ಫೋಟೋ ತೋರಿಸಿ, ಅದರಲ್ಲಿರುವ ವ್ಯಕ್ತಿ ನಾನೇ ಎಂದು ನುಡಿದಿರುತ್ತಾರೆ. ಅದನ್ನು **ನಿಪಿ.14** ಎಂದು, ಗುರುತಿಸಿದಂತಹ ತನ್ನ ಭಾವಚಿತ್ರವನ್ನು **ನಿಪಿ.14(ಎ)** ಎಂದು ಗುರುತಿಸಲಾಯಿತು. ಸದರಿ ಬೈಕನ್ನು ಓಡಿಸುತ್ತಿರುವವರು 7 ನೇ ಪ್ರತಿವಾದಿ ಎಂದರೆ ಸರಿ. ಸದರಿ 7 ನೇ ಪ್ರತಿವಾದಿಯ ಭಾವಚಿತ್ರವನ್ನು **ನಿಪಿ.14(ಬಿ)** ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ಫೋಟೋ ತೋರಿಸಿ, ಅದರಲ್ಲಿರುವ ವ್ಯಕ್ತಿ ನಾನೇ ಎಂದು ನುಡಿದಿರುತ್ತಾರೆ. ಅದನ್ನು **ನಿಪಿ.15** ಎಂದು, ಗುರುತಿಸಿದಂತಹ ತನ್ನ ಭಾವಚಿತ್ರವನ್ನು **ನಿಪಿ.15(ಎ)** ಎಂದು ಗುರುತಿಸಲಾಯಿತು. ಸದರಿ ಫೋಟೋದಲ್ಲಿ ನಿಂತಿರುವವರು 7 ನೇ ಪ್ರತಿವಾದಿ ಎಂದರೆ ಸರಿ. ಸದರಿ 7 ನೇ ಪ್ರತಿವಾದಿಯ ಭಾವಚಿತ್ರವನ್ನು **ನಿಪಿ.15(ಬಿ)** ಎಂದು ಗುರುತಿಸಲಾಯಿತು. ಪ್ರತಿಬಾರಿಯೂ 7 ನೇ ಪ್ರತಿವಾದಿಯೇ ನನ್ನನ್ನು ಸಾಕ್ಷಿ ನುಡಿಯಲು ನ್ಯಾಯಾಲಯಕ್ಕೆ ಕರೆದುಕೊಂಡು ಬರುತ್ತಾರೆ ಎಂದರೆ ಸರಿಯಲ್ಲ.

4. ನನ್ನ ಪ್ರಮಾಣ ಪತ್ರದಲ್ಲಿರುವ ಅಂಶಗಳು ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಸುಮಾರು ದಿನಗಳಾಗಿದೆ ಮರೆತಿದ್ದೇನೆ ಎಂದು ನುಡಿಯುತ್ತಾರೆ. ನನ್ನ ಪ್ರಮಾಣ ಪತ್ರವನ್ನು

ಇಂಗ್ಲೀಷ್ ನಲ್ಲಿ ಬೆರಳಚ್ಚು ಮಾಡಲಾಗಿದೆ. ನನಗೆ ಅದನ್ನು ಓದಿ ಹೇಳಿದ್ದಾರೆ. ನನಗೆ ಮತ್ತು ವಾದಿಗೆ ದಾವಾಸ್ವತ್ತುಗಳು ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ನನ್ನ ತಾತ ಸ್ವಂತವಾಗಿ ಸಂಪಾದನೆ ಮಾಡಿದ್ದರಿಂದ ಅದು ನನ್ನ ಸ್ವಯಾರ್ಜಿತ ಸ್ವತ್ತು ಎಂದು ನುಡಿಯುತ್ತಾರೆ. ದಾವಾಸ್ವತ್ತುಗಳು ವಾದಿಯ ಅಜ್ಜಿಯ ಸ್ವತ್ತಾದ್ದರಿಂದ ಅದು ನನ್ನ ಸ್ವಯಾರ್ಜಿತ ಸ್ವತ್ತಲ್ಲ ಎಂದರೆ ಸರಿಯಲ್ಲ. ನಾನು, 2 ರಿಂದ 4 ಮತ್ತು 7 ನೇ ಪ್ರತಿವಾದಿಗಳು ಸೇರಿ ಸ್ವಯಾರ್ಜಿತ ಸ್ವತ್ತು ಎಂದು ದಾಖಲಾತಿಗಳನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ನೀವು ಸೃಷ್ಟಿಸಿದ ದಾಖಲಾತಿಗಳಿಗೆ ವಾದಿ ಸಹಿ ಮಾಡಿದ್ದಾರಾ ಎಂದರೆ ಇಲ್ಲವೆಂದು ನುಡಿಯುತ್ತಾ ದಾಖಲೆಗಳನ್ನು ಸೃಷ್ಟಿಸಿಲ್ಲ ಎಂದು ನುಡಿಯುತ್ತಾರೆ. ಅಕ್ಕಯ್ಯಮ್ಮನವರ ಸ್ವತ್ತನ್ನು ಮಾರಾಟ ಮಾಡಲು ನಮಗೆ ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ. ನಾನು 7 ನೇ ಪ್ರತಿವಾದಿಯೊಂದಿಗೆ ಶಾಠೀಕಾಗಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

5. ನಿಡಿ.1 ಕ್ಕೆ ಯಾರು ಸಾಕ್ಷಿದಾರರಾಗಿ ಸಹಿ ಮಾಡಿದ್ದಾರೆಂದು ನನಗೆ ಗೊತ್ತಿಲ್ಲ. ಯಾರು ಪತ್ರ ಬರಹಗಾರರು ಎಂದು ಮಾಹಿತಿ ಇಲ್ಲ. ಅದಕ್ಕೆ ಯಾರ್ಯಾರು ಪತ್ರಕ್ಕೆ ಸಹಿ ಮಾಡಿದ್ದಾರೆಂದು ಗೊತ್ತಿಲ್ಲ. ಅದಕ್ಕೆ ಯಾರು ಹೆಬ್ಬೆಟ್ಟಿನ ಗುರುತನ್ನು ಹಾಕಿದ್ದಾರೆಂದು ಮಾಹಿತಿ ಇಲ್ಲ. ಯಾವ ತಾರೀಖು, ತಿಂಗಳಿನಂದು ನಿಡಿ.1 ನೊಂದಣಿಯಾಯಿತು ಎಂದು ಗೊತ್ತಿಲ್ಲ. ಆದರೆ 2008 ರಲ್ಲಿ ನೊಂದಣಿಯಾಯಿತು. ನನ್ನ ತಾತ, ತನ್ನ ಕೊನೆಯ ಮಗಳ ಹೆಸರಿಗೆ ಒಂದು ಲಕ್ಷ ರೂಪಾಯಿ ಠೇವಣಿ ಮಾಡಲು, ಮನೆ ರಿಪೇರಿ ಮಾಡಲು ಮತ್ತು ಅವರ ವೈದ್ಯಕೀಯ ಖರ್ಚಿಗೆ ಮಾರಾಟ ಮಾಡಬೇಕೆಂದು ತಿಳಿಸಿದ್ದರು. ನಂತರ ನನ್ನ ತಾತನೇ ವ್ಯವಹಾರ ಮಾಡಿದ್ದರು. ವ್ಯವಹಾರದ ಸಮಯದಲ್ಲಿ ನಾನು ಇರಲಿಲ್ಲ. ವಾದಿಯೂ ಸಹ ಇರಲಿಲ್ಲ. ಸದರಿ ಠೇವಣಿ ಇಡುವಾಗ ನಾನು ನೋಡಿದ್ದೇನೆ. ಆದರೆ ಖಾತೆ ಸಂಖ್ಯೆ ಗೊತ್ತಿಲ್ಲ. 2008 ರಲ್ಲಿ 3 ಎಕರೆ 13 ಗುಂಟೆ ಎಷ್ಟು ಬೆಲೆ ಬಾಳುತ್ತಿತ್ತು ಎಂದು ಗೊತ್ತಿಲ್ಲ. ಆ ಸಮಯದಲ್ಲಿ ಪತ್ರ ಬರಹಗಾರರಿಂದಗಾಲೀ, ನನ್ನ ತಾತನಿಂದಾಗಲೀ ಆ ಜಮೀನು ಎಷ್ಟು ಬೆಲೆ ಬಾಳುತ್ತಿತ್ತು ಎಂದು ತಿಳಿದುಕೊಂಡಿಲ್ಲ.

6. ಅಕ್ಕಮ್ಮಯ್ಯನವರ ದಾವಾ ಐಟಂ ನಂ.1 ರ ಸ್ವತ್ತು 7 ನೇ ಪ್ರತಿವಾದಿಗೆ ಕಾನೂನು ಬದ್ದವಾಗಿ ಮಾರಾಟವಾಗಿಲ್ಲ ಎಂದರೆ ಸರಿಯಲ್ಲ. ವಾದಿಯ ಹಕ್ಕನ್ನು ವಂಚಿಸಲು ನಾವು ಪ್ರತಿವಾದಿಗಳು ನಿಡಿ.1 ನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ದಾವಾಸ್ವತ್ತುಗಳಲ್ಲಿ ಈಗಲೂ ವಾದಿಯೇ ಹಕ್ಕು ಸ್ವಾಧೀನ ಹೊಂದಿದ್ದಾರೆ ಎಂದರೆ ಸರಿಯಲ್ಲ. ವಾದಿಗೆ ಮೋಸಮಾಡಲು 7 ನೇ ಪ್ರತಿವಾದಿಯೊಂದಿಗೆ ಶಾಮೀಕಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹಿಂಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**